KATK010032612022

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ.75/2022**

ಪ್ರಾ.ಸಾ. ಃ **5**

ದೋ.ಸಾ. ಃ **3**

ದಿ.**20.11.2025**

ಹೆಸರು ಃ ಭಾಗ್ಯಮ್ಮ

ಗಂಡನ ಹೆಸರು ಃ ಬಸವರಾಜು

ವಯಸ್ಸು ಃ **65** ವರ್ಷ

ಉದ್ಯೋಗ ಃ ವ್ಯವಸಾಯ

ವಾಸಸ್ಥಳ ಃ ಪಾಲಸಂದ್ರ

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ಚಾ ಸಾ 1 ವಸಂತರಾಮ ನನ್ನ ಮಗ. ಚಾ ಸಾ 2 ಬಸವರಾಜು ನನ್ನ ಗಂಡ. 1 ನೇ ಆರೋಪಿ ರಾಮಚಂದ್ರಯ್ಯ ನನ್ನ ಮೈದುನ. 2 ನೇ ಆರೋಪಿ ಲಕ್ಷ್ಮಮ್ಮ 1 ನೇ ಆರೋಪಿಯ ಹೆಂಡತಿ, 3 ನೇ ಆರೋಪಿ ಜಯರಾಮ ಮತ್ತು 4 ನೇ ಆರೋಪಿ ಮಂಜುನಾಥ 1 ನೇ ಆರೋಪಿಯ ಮಕ್ಕಳು.
2. ಸುಮಾರು 4 ವರ್ಷಗಳ ಹಿಂದೆ ಮಧ್ಯಾಹ್ನ 3.30 ಗಂಟೆಗೆ ನಾನು ತೋಟದ ಮನೆಯಲ್ಲಿದ್ದೆನು. ಆಗ 1 ನೇ ಆರೋಪಿಯ ತೋಟದ ಪಕ್ಕದಲ್ಲಿರುವ ರಸ್ತೆಯಲ್ಲಿ ಗಲಾಟೆಯಾಗಿದ್ದನ್ನು ಕೇಳಿ, ನಾನು ಮತ್ತು ನನ್ನ ಗಂಡ ಅಲ್ಲಿಗೆ ಹೋದೆವು. ಆರೋಪಿತರು ನನ್ನ ಮಗ ವಸಂತರಾಮನ ಜೊತೆಗೆ ಜಗಳ ಮಾಡುತ್ತಿದ್ದರು. ತೋಟದ ಪಕ್ಕದಲ್ಲಿರುವ ರಸ್ತೆಯಲ್ಲಿ ಏಕೆ ಓಡಾಡುತ್ತಿದ್ದೀಯಾ ಎಂದು ಗಲಾಟೆ ಮಾಡಿದರು. ಆ ಗಲಾಟೆಯಲ್ಲಿ ನನ್ನ ಮಗನಿಗೆ ದೊಣ್ಣೆಯಿಂದ ಹೊಡೆದರು. 1 ನೇ ಆರೋಪಿ ದೊಣ್ಣೆಯಿಂದ ನನ್ನ ಮಗ ವಸಂತರಾಮನ ಪಕ್ಕೆಗೆ ಹೊಡೆದನು. 2 ನೇ ಆರೋಪಿ ಲಕ್ಷ್ಮಮ್ಮ ನನ್ನ ಮಗನ ಕಣ್ಣಿಗೆ ಖಾರದ ಪುಡಿ ಎರಚಿದ್ದಳು. ಲಕ್ಷ್ಮಮ್ಮ ಕಸದ ಪೊರಕೆಯಿಂದ ವಸಂತರಾಮನಿಗೆ ಹೊಡೆದಳು. ನಂತರ ನಾವು ನನ್ನ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಈ ರೀತಿ ಗಲಾಟೆಯಾಗಿದ್ದು

ಹೊರತುಪಡಿಸಿ ಬೇರೇನೂ ನನಗೆ ಗೊತ್ತಿಲ್ಲ. ಈ ಗಲಾಟೆಯನ್ನು ನಾನು ನೋಡಿದ್ದೇನೆಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**<u>ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>**

3. ಈ ಗಲಾಟೆ ದಿ.24.05.2019 ರಂದು ನಡೆಯಿತು ಎಂದರೆ ನಿಜ. ಗಲಾಟೆ ಬೆಳಿಗ್ಗೆ 10.30 ಗಂಟೆಗೆ ಆಗಿತ್ತು ಎಂದರೆ ನಾನು ಮರೆತಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಮಂಚಗೊಂಡನಹಳ್ಳಿ ಗ್ರಾಮದ ಸ.ನಂ.32/2 ಬಿ ಗೆ ಸಂಬಂಧಿಸಿದಂತೆ ನಮ್ಮ ಹಾಗೂ ಆರೋಪಿತರ ಮಧ್ಯೆ ವಿವಾದವಿದೆ ಎಂದರೆ ನಿಜ. ಗಲಾಟೆಯಾಗಿದ್ದ ರಸ್ತೆಗೆ ಸಂಬಂಧಿಸಿದಂತೆ ನಮಗೂ ಆರೋಪಿತರಿಗೂ ವಿವಾದ ಇದೆ ಎಂದರೆ ನಿಜ. ಆ ರಸ್ತೆಗೆ ಸಂಬಂಧಪಟ್ಟಂತೆ ಗಲಾಟೆಯಾಗಿದ್ದು ಎಂದರೆ ನಿಜ. ನನ್ನ ಮಗ ಜಮೀನು ಕೆಲಸ ಮುಗಿಸಿಕೊಂಡು ದ್ವಿಚಕ್ರ ವಾಹನದಲ್ಲಿ ಮನೆಗೆ ಬರುತ್ತಿರುವಾಗ ಆರೋಪಿತರು ರಸ್ತೆಗೆ ಅಡ್ಡಬಂದು ನನ್ನ ಮಗನನ್ನು ಅಡ್ಡಗಟ್ಟಿ ನಿಲ್ಲಿಸಿದರು ಎಂದರೆ ನಿಜ. ಈ ರಸ್ತೆಗೂ ನಿನಗೂ ಯಾವುದೇ ಹಕ್ಕು ಇರುವುದಿಲ್ಲ ಎಂದು ಜಗಳ ತೆಗೆದು, ರಾಮಚಂದ್ರಯ್ಯ ದೊಣ್ಣೆಯಿಂದ ನನ್ನ ಮಗ ವಸಂತರಾಮನ ಬಲಭುಜಕ್ಕೆ ಬಲವಾಗಿ ಹೊಡೆದರು ಎಂದರೆ ನಿಜ. ಮಂಜುನಾಥ ಕಬ್ಬಿಣದ ರಾಡಿನಿಂದ ವಸಂತರಾಮನ ಬಲಭುಜಕ್ಕೆ ಬಲವಾಗಿ ಹೊಡೆದನು ಎಂದರೆ ನಿಜ. ಲಕ್ಷ್ಮಮ್ಮ ಮಚ್ಚಿನ ಹಿಂಬದಿಯಿಂದ ನನ್ನ ಮಗನ ಮುಂಗೈಗೆ ಹೊಡೆದರು ಎಂದರೆ ನಿಜ. ಜಯರಾಮ ಚಾಕುವಿನಿಂದ ನನ್ನ ಮಗನ ಎಡಕೈನ ಮೊಣಕೈಗೆ ಬಲವಾಗಿ ಚುಚ್ಚಿ ರಕ್ತಗಾಯ ಮಾಡಿದನು ಎಂದರೆ ನಿಜ. ಆರೋಪಿ ಮಂಜುನಾಥ ನನ್ನ ಮಗನನ್ನು ಕುರಿತು ನಿನ್ನನ್ನು ಇವತ್ತು ಉಳಿಸುವುದಿಲ್ಲ ಎಂದು ಕಬ್ಬಿಣದ ರಾಡಿನಿಂದ ನನ್ನ ಮಗನ ಸೊಂಟಕ್ಕೆ ಬಲವಾಗಿ ಹೊಡೆದನು, ರಾಮಚಂದ್ರಯ್ಯ ಬಲಗಾಲಿನಿಂದ ನನ್ನ ಮಗನ ಬಲ ಎದೆಗೆ ಎರಡು ಬಾರಿ ಹೊಡೆದನು, ಮಂಜುನಾಥ ಕಾಲಿನಿಂದ ಬಲ ಎದೆಗೆ ಒದ್ದು, ಮುಷ್ಠಿಯಿಂದ ಬಲಕೈಗೆ ಗುದ್ದಿದನು ಎಂದರೆ ನಿಜ. ಲಕ್ಷ್ಮಮ್ಮ ನನ್ನ

ಮಗನನ್ನು ಕುರಿತು ನಿನ್ನನ್ನು ಇವತ್ತು ಜೀವಸಹಿತ ಉಳಿಸುವುದಿಲ್ಲ ಎಂದು ಕಾಲಿನಿಂದ ಗುಪ್ತಾಂಗದ ಮೇಲೆ ನಾಲ್ಕಾರು ಬಾರಿ ಬಲವಾಗಿ ಒದ್ದಿದ್ದಲ್ಲದೆ, ಕೊಲೆ ಮಾಡುವ ಉದ್ದೇಶದಿಂದ ನನ್ನ ಮಗನ ಜುಟ್ಟು ಹಿಡಿದುಕೊಂಡು ತಲೆಯನ್ನು ನೆಲಕ್ಕೆ ಅಪ್ಪಳಿಸಿದಳು ಎಂದರೆ ನಿಜ. ಅದೂ ಅಲ್ಲದೆ ಕುಡುಗೋಲಿನ ಹಿಂಬದಿಯಿಂದ ನನ್ನ ಮಗನ ಬಲದವಡೆಗೆ ಹೊಡೆದಳು, ನಂತರ ಲಕ್ಷ್ಮಮ್ಮ ಮತ್ತೆ ಪೊರಕೆಯಿಂದ ನನ್ನ ಮಗನ ಮುಖಕ್ಕೆ ಹಲವಾರು ಬಾರಿ ಹೊಡೆದು, ನಿನ್ನನ್ನು ಕುಲದಿಂದ ಹೊರಗೆ ಹಾಕುತ್ತೇವೆಂದು ನಿಂದಿಸಿದಳು ಎಂದರೆ ನಿಜ. ಎಲ್ಲರೂ ಬಾಯಿಗೆ ಬಂದಂಗೆ ಬೈಯುತ್ತಿರುವಾಗ ಲಕ್ಷ್ಮಮ್ಮಳು ಖಾರದ ಪುಡಿ ಮುಖಕ್ಕೆ ಎರಚಿದಳು ಎಂದರೆ ನಿಜ. ನಾವು ಈ ಗಲಾಟೆಯನ್ನು ನೋಡಿ, ಜಗಳವನ್ನು ಬಿಡಿಸಿ, ಸಿರಾ ಸರ್ಕಾರಿ ಆಸ್ಪತ್ರೆಗೆ ನನ್ನ ಮಗನನ್ನು ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆವು ಎಂದರೆ ನಿಜ. ಅವರು ಹಲ್ಲೆ ಮಾಡಲು ತಂದಂತಹ ಆಯುಧಗಳನ್ನು ಅಲ್ಲೇ ಬಿಟ್ಟು ಹೋದರು ಎಂದರೆ ನಿಜ. ಈ ವಿಚಾರವನ್ನೇ ಪೋಲೀಸರ ಮುಂದೆ ಹೇಳಿದ್ದೇನೆ. ಗಲಾಟೆಯಾಗಿ 6 ವರ್ಷಗಳಾಗಿದ್ದರಿಂದ ನನಗೆ ಮರೆತುಹೋಗಿದೆ ಎಂದರೆ ನಿಜ.

4. ಆ ದಿವಸ ನನ್ನ ಮಗನಿಗೆ ಹೊಡೆಯಲು ಉಪಯೋಗಿಸಿದ ಮುದ್ದೇಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ದೊಣ್ಣೆ, ಕಬ್ಬಿಣದ ರಾಡ್, ಕಬ್ಬಿಣದ ಮಚ್ಚು, ಕುಡುಗೋಲು, ಕಬ್ಬಿಣದ ಚಾಕು, ತೆಂಗಿನ ಕಡ್ಡಿಯ ಪೊರಕೆ ಮತ್ತು ಖಾರದ ಪುಡಿಯನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು ಮಾ 1 ರಿಂದ 6 ಮತ್ತು 8 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು ಶ್ರೀ.ಎಸ್.ಪುಟ್ಟರಾಜಣ್ಣ, ವಕೀಲರಿಂದ ಆರೋಪಿತರ ಪರವಾಗಿ:**

ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ 231(2) ರಡಿಯಲ್ಲಿ ಹಾಕಿದ ಅರ್ಜಿಯಲ್ಲಿ ಮಾಡಿದ ಆದೇಶದಂತೆ 1 ಮತ್ತು 2 ನೇ ಸಾಕ್ಷಿದಾರರ ಮುಖ್ಯ ವಿಚಾರಣೆಯಾದ ನಂತರ ಪಾಟೀ ಸವಾಲು ಮಾಡಲು ಪ್ರಕರಣವನ್ನು ಮುಂದೂಡಲಾಯಿತು.

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು